ಕೇಶವರೆಡ್ಡಿ ಹಂದ್ರಾಳ

ಕಲೆ: ವೆಂಕಟ್ರಮಣ ಭಟ್

# ಅತ್ತರು ಮಾರುವ ಹುಡುಗ





ಕತೆಗೊಂದು ಸಣ್ಣ ಮುನ್ನುಡಿ:

ತಿಂಗಳ ಹಿಂದೆ ವೈಯಕ್ತಿಕ ಕೆಲಸದ ನಿಮಿತ್ತ ನಾನು ಮತ್ತು ನನ್ನ ಹೆಂಡತಿ ಹೈದರಾಬಾದಿಗೆ ಹೋಗಿದ್ದೆವು. ಹೋದ ದಿನ ಸಂಜೆಯೊಳಗೆ ಕೆಲಸ ಮುಗಿದಿತ್ತು. ಆದರೆ ನಾವು ಹಿಂತಿರುಗಿ ಬರಲು ಬುಕ್ ಮಾಡಿದ್ದ ವಿಮಾನ ಪ್ರಯಾಣಕ್ಕೆ ಇನ್ನೂ ಎರಡು ದಿನ ಬಾಕಿ ಇತ್ತು. ಅವತ್ತೇ ವಿಮಾನ ಪ್ರಯಾಣ ಮಾಡಲು ನಾನು ನಡೆಸಿದ ಪ್ರಯತ್ನ ಫಲ ಕೊಟ್ಟಿರಲಿಲ್ಲ. ಹಾಗಾಗಿ ಎರಡನೆಯ ದಿನ ಚಾರ್ಮಿನಾರ್ ಮತ್ತು ಬಿರ್ಲಾ ಮಂದಿರಗಳಿಗೆ ಭೇಟಿ ಕೊಟ್ಟಿದ್ದೆವು. ಚಾರ್ಮಿನಾರ್ ಬಳಿ ಅತ್ತರು ಮಾರುತ್ತಿದ್ದ ಯುವಕನೊಬ್ಬ ಕಣ್ಣಿಗೆ ಬಿದ್ದಿದ್ದ. ಅವನು ಅತ್ತರು ಮಾರುತ್ತಿದ್ದ ರೀತಿ ವಿಶಿಷ್ಟವಾಗಿದ್ದು ಬೆರಗು ಹುಟ್ಟಿಸುವಂತಿತ್ತು. ಅವನ ಬಳಿ ನಾವೂ ಒಂದು ಸೀಸೆ ಅತ್ತರನ್ನು ಕೊಂಡಿದ್ದೆವು. ಮೂರನೇ ದಿನ ಸಂಜೆ ಏಳು ಗಂಟೆಗೆ ಫ್ಲೈಟ್ ಇದ್ದಿದ್ದರಿಂದ ಬೆಳಗ್ಗೆ ಹತ್ತು ಗಂಟೆಗೆಲ್ಲಾ ಗೋಲ್ಕೊಂಡ ನೋಡಲು ಹೋಗಿದ್ದೆವು. ಅಲ್ಲಿಯೂ ಅತ್ತರು ಮಾರುತ್ತಿದ್ದ ಅದೇ ಹುಡುಗ ಕಂಡಿದ್ದ. ಅದೇ ಮಾತು, ಅದೇ ಸ್ಟೈಲ್. ಅಂದು ಸಂಜೆ ಬೆಂಗಳೂರಿಗೆ ಹೊರಟಾಗ ಏರ್‌ಪೋರ್ಟ್‌ನಲ್ಲಿ ಸೆಕ್ಯುರಿಟಿ ಚೆಕ್ ಮುಗಿಸಿಕೊಂಡು ವಿಮಾನ ಹತ್ತುವ ಗೇಟ್ ಕಡೆ ನಡೆಯುವಾಗ ನನ್ನ ಹೆಂಡತಿ,

"ರೀ, ಅಲ್ನೋಡಿ ಪೂಜಾ ಹೆಗ್ಡೆ..." ಎಂದಿದ್ದಳು. ಅತ್ಯಂತ ಲವಲವಿಕೆಯಿಂದ ನಮ್ಮ ಮುಂದೆ ನಟಿ ಪೂಜಾ ಹೆಗ್ಡೆ ನಡೆದು ಹೋಗುತ್ತಿರುವುದು ಕಣ್ಣಿಗೆ ಬಿದ್ದಿತ್ತು.

'ದುವ್ವಾಡ ಜಗನ್ನಾಥಂ' ಮತ್ತು 'ಅರವಿಂದ ಸಮೇತ ವೀರ ರಾಘವ' ಸೇರಿದಂತೆ ಆಕೆಯ ಮೂರ್ನಾಲ್ಕು ಸಿನಿಮಾಗಳನ್ನು ನೋಡಿದ್ದೆ. ಆಕೆ ಕನ್ನಡತಿಯೆಂಬುದು ಕೂಡ ಖುಷಿಯ ಸಂಗತಿಯೇ ಆಗಿತ್ತು. ಸ್ನಿಗ್ಧ ಸೌಂದರ್ಯವನ್ನು ಆಕೆ ಮುಡಿಗೇರಿಸಿಕೊಂಡು ನಡೆಯುತ್ತಿರುವಂತೆ ಕಂಡಿತ್ತು ನನಗೆ. ಜೊತೆಗೆ ಆಕೆ ಹಾಕಿದ್ದ ಸೆಂಟ್ ಅತ್ಯಂತ ಮಧುರವಾದ ಪರಿಮಳವನ್ನು ಹರಡಿತ್ತು. ಆಕೆ ಮುಂಬಯಿ ವಿಮಾನ ಹತ್ತಲು ಬೇರೊಂದು ಗೇಟಿನ ಹತ್ತಿರ